## 2020-21 ನೇ ಸಾಲಿನ ರಾಷ್ಟ್ರೀಯ ಆಹಾರ ಭದ್ರತಾ ಅಭಿಯಾನ- ಎನ್. ಎಫ್.ಎಸ್.ಎಂ- ಎಣ್ಣೆಕಾಳು ಬೆಳೆಗಳ ಅನುಷ್ಠಾನ ಮಾರ್ಗಸೂಚಿಗಳು

ಎಣ್ಣೆಕಾಳು ಬೆಳೆಗಳಲ್ಲಿ ಉತ್ಪಾದನೆಯನ್ನು ಮತ್ತು ಉತ್ಪಾದಕತೆಯನ್ನು ಹೆಚ್ಚಿಸುವ ಉದ್ದೇಶದಿಂದ ರಾಷ್ಟ್ರೀಯ ಆಹಾರ ಭದ್ರತಾ ಅಭಿಯಾನ - ಎಣ್ಣೆಕಾಳು ಯೋಜನೆಯನ್ನು ರಾಜ್ಯದಲ್ಲಿ 27 ಜಿಲ್ಲೆಗಳಲ್ಲಿ (ಕೊಡಗು, ದಕ್ಷಿಣಕನ್ನಡ ಹೊರತುಪಡಿಸಿ) ಅನುಷ್ಠಾನಗೊಳಿಸಲಾಗುತ್ತದೆ.

**ಯೋಜನೆಯ ಉದ್ದೇಶಗಳು:**

1. ಆಯ್ಕೆ ಮಾಡಿರುವ ಜಿಲ್ಲೆಗಳಲ್ಲಿ ಎಣ್ಣೆಕಾಳು ಬೆಳೆಗಳಲ್ಲಿ ಕ್ಷೇತ್ರ ವಿಸ್ತೀರ್ಣ ಹಾಗೂ ಉತ್ಪಾದಕತೆ ಹೆಚ್ಚು ಮಾಡುವ ಮುಖಾಂತರ ಹೆಚ್ಚು ಉತ್ಪಾದನೆಯನ್ನು ಸಾಧಿಸುವುದು.
2. ಕ್ಷೇತ್ರ ಮಟ್ಟದಲ್ಲಿ ಮಣ್ಣಿನ ಫಲವತ್ತತೆ ಹಾಗೂ ಉತ್ಪಾದಕತೆಯನ್ನು ಸ್ಥಿರಗೊಳಿಸುವುದು.
3. ಕ್ಷೇತ್ರ ಮಟ್ಟದಲ್ಲಿ ಕೃಷಿ ಆದಾಯ ಹೆಚ್ಚಿಸುವುದರ ಮೂಲಕ ರೈತರಲ್ಲಿ ಆತ್ಮ ವಿಶ್ವಾಸವನ್ನು ಮೂಡಿಸುವುದು.

**ಯೋಜನೆಯ ಪ್ರಮುಖ ಘಟಕಗಳು**

1. ಬಿತ್ತನೆ ಬೀಜ ವಿತರಣೆ
2. ಗುಚ್ಛ ಪ್ರಾತ್ಯಕ್ಷತೆಗಳು
3. ಉತ್ಪಾದನಾ ಪರಿಕರಗಳು
4. ಸಸ್ಯ ಸಂರಕ್ಷಣಾ ಸಿಂಪರಣಾ ಉಪಕರಣಗಳು
5. ಕೃಷಿ ಯಂತ್ರೋಪಕರಣಗಳು
6. ರೈತರ ತರಬೇತಿಗಳು

**ಕಾರ್ಯಕ್ರಮದ ಅನುಮೋದನೆ ಹಾಗೂ ಅನುಷ್ಠಾನ ಪ್ರಕ್ರಿಯೆ**

ಕೇಂದ್ರ ಕೃಷಿ ಮತ್ತು ಸಹಕಾರ ಇಲಾಖೆ ಭಾರತ ಸರ್ಕಾರ ಇವರಿಂದ ಪ್ರತಿ ರಾಜ್ಯಕ್ಕೆ ತಾತ್ಕಾಲಿಕ ಕಾರ್ಯಕ್ರಮವನ್ನು ನೀಡುತ್ತಾ ವಾರ್ಷಿಕ ಕ್ರಿಯಾ ಯೋಜನೆಯನ್ನು ಸಿದ್ಧಪಡಿಸುವಂತೆ ನಿರ್ದೇಶಿಸಲಾಗುತ್ತದೆ. ಕಾರ್ಯಕ್ರಮದಲ್ಲಿ ಸೂಚಿಸಲಾದ ಮಾರ್ಗಸೂಚಿಗಳನ್ನು ಹಾಗೂ ಆಯಾ ಬೆಳೆಗಳಲ್ಲಿ ಜಿಲ್ಲೆಯ ಆದ್ಯತೆ ಮತ್ತು ಸಾಮರ್ಥ್ಯತೆಯನ್ನು ಪರಿಗಣನೆಯಲ್ಲಿರಿಸಿ ಜಿಲ್ಲಾ ಮಟ್ಟದ ರಾಷ್ಟ್ರೀಯ ಆಹಾರ ಭದ್ರತಾ ಅಭಿಯಾನ- ಎಣ್ಣೆಕಾಳು ಕಾರ್ಯಕಾರಿ ಸಮಿತಿಯು ಕ್ರಿಯಾ ಯೋಜನೆಯನ್ನು ಸಿದ್ಧಪಡಿಸಿ ರಾಜ್ಯ ಅಭಿಯಾನ ನಿರ್ದೇಶಕರಿಗೆ ಸಲ್ಲಿಸಲಾಗುವುದು.

ಜಿಲ್ಲೆಗಳ ಕ್ರಿಯಾ ಯೋಜನೆಗಳನ್ನು ಪರಿಗಣನೆಯಲ್ಲಿರಿಸಿ ಸಿದ್ಧಪಡಿಸಲಾಗುವ ರಾಜ್ಯ ಕ್ರಿಯಾ ಯೋಜನೆಗೆ ರಾಜ್ಯ ಮಟ್ಟದ ರಾಷ್ಟ್ರೀಯ ಆಹಾರ ಭದ್ರತಾ ಅಭಿಯಾನ ಕಾರ್ಯಕಾರಿ ಸಮಿತಿಯ ಅನುಮೋದನೆ ಪಡೆದ ನಂತರ ಕ್ರಿಯಾ ಯೋಜನೆಯನ್ನು ಕೇಂದ್ರ ರಾಷ್ಟ್ರೀಯ ಆಹಾರ ಭದ್ರತಾ ಅಭಿಯಾನ -ಎಣ್ಣೆಕಾಳು ಕಾರ್ಯಕಾರಿ ಸಮಿತಿಯ ಅನುಮೋದನೆಗಾಗಿ ಕೇಂದ್ರ ಸರ್ಕಾರಕ್ಕೆ

ಸಲ್ಲಿಸಲಾಗುವುದು. ಕ್ರಿಯಾ ಯೋಜನೆಯೊಂದಿಗೆ ಹಿಂದಿನ ವರ್ಷದಲ್ಲಿ ಅನುಷ್ಠಾನಗೊಳಿಸಲಾದ ಸದರಿ ಯೋಜನೆಯ ಪ್ರಗತಿ ವಿವರ, ನೂತನ ಅವಿಷ್ಕಾರಗಳು, ಫಲಶೃತಿ, ಅನುಭವ ಯಶೋಗಾಥೆಗಳ ವಿವರಗಳನ್ನು ಸಹ ಸಲ್ಲಿಸಲಾಗುವುದು.

**ಫಲಾನುಭವಿಗಳು ಮತ್ತು ಕ್ಷೇತ್ರ ಆಯ್ಕೆಗೆ ಮಾನದಂಡಗಳು:**

- ✓ ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಉಪಯೋಜನೆಯ ಅನುಷ್ಠಾನ ಕುರಿತು ಭಾರತ ಸರ್ಕಾರದ ನಿರ್ಣಯದಂತೆ ಯೋಜನೆಯ ಒಟ್ಟಾರೆ ಅನುದಾನದಲ್ಲಿ ವಿಶೇಷ ಘಟಕ ಯೋಜನೆಗೆ ಮತ್ತು ಗಿರಿಜನ ಉಪಯೋಜನೆಗೆ ಮೀಸಲಿರಿಸಿರುವ ಅನುದಾನವನ್ನು ಆಯಾ ಜಿಲ್ಲೆಯಲ್ಲಿ ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಜನಸಂಖ್ಯೆ ಮತ್ತು ಭೂ ಹಿಡುವಳಿಯನ್ನಾಧರಿಸಿ ನಿಗದಿಪಡಿಸಿ ಬಿಡುಗಡೆಗೊಳಿಸಲಾಗುವುದು.
- ✓ ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ಅನುದಾನದ ಕನಿಷ್ಠ ಶೇ.33 ರಷ್ಟನ್ನು ಮೀಸಲಿರಿಸುವುದು.
- ✓ ಮಹಿಳಾ ರೈತರಿಗೆ ಮತ್ತು ಅಲ್ಪ ಸಂಖ್ಯಾತರಿಗೆ ಕ್ರಮವಾಗಿ ಅನುದಾನದ ಕನಿಷ್ಠ ಶೇ.30 ಮತ್ತು 15 ರಷ್ಟನ್ನು ಮೀಸಲಿರಿಸುವುದು.
- ✓ ಅಧ್ಯಕ್ಷರು, ಜಿಲ್ಲಾಮಟ್ಟದ ರಾಷ್ಟ್ರೀಯ ಆಹಾರ ಭದ್ರತಾ ಅಭಿಯಾನ ಎಣ್ಣೆಕಾಳು ಕಾರ್ಯಕಾರಿ ಸಮಿತಿ ಇವರಿಂದ ರಚಿಸಲ್ಪಟ್ಟ ಬೀಜ ಸಮಿತಿಯು ಜಿಲ್ಲೆಯಲ್ಲಿ ಬಂದಿರುವ ಬೀಜ ಬೇಡಿಕೆ, ವಿತರಣೆ ಮತ್ತು ಫಲಾನುಭವಿಗಳ ಪಟ್ಟಿಯನ್ನು ಪರಿಶೀಲಿಸುವುದು. ಬಿತ್ತನೆ ಬೀಜ ಸಹಾಯಾನುದಾನವು ಕೇಂದ್ರ ಮಟ್ಟದಲ್ಲಿ ವಿತರಣೆಯಾಗಿದ್ದಲ್ಲಿ ವಿತರಣೆಯ ನಂತರ ಫಲಾನುಭವಿಗಳ ಪಟ್ಟಿಯನ್ನು ಐಚ್ಛಿಕವಾಗಿ ಪರಿಶೀಲಿಸಿ ಅನುಮೋದಿಸುವುದು.

- ಪ್ರಾತ್ಯಕ್ಷಿಕೆಗಳು, ರೈತ ತರಬೇತಿಗಳನ್ನು ಏರ್ಪಡಿಸುವುದು ಮತ್ತು ಮೌಲ್ಯಮಾಪನವನ್ನು ಕೈಗೊಳ್ಳುವಲ್ಲಿ ಕೃ.ವಿ.ವಿ.ಯದ ವಲಯ ಸಂಶೋಧನಾ ಕೇಂದ್ರಗಳು, ಕೆ.ವಿ.ಕೆಗಳು ATMA, NGOಗಳು ಮತ್ತು ಸಹ ಇಲಾಖೆಗಳೂ ಸಕ್ರಿಯವಾಗಿ ಪಾಲ್ಗೊಳ್ಳುವಂತೆ ಕ್ರಮವಹಿಸುವುದು.
- ಜಿಲ್ಲಾ ಮಟ್ಟದ ಯೋಜನಾ ನಿರ್ವಹಣೆ ತಂಡವು ಸಂಶೋಧನಾ ಕೇಂದ್ರಗಳು ಮತ್ತು ಸಹ ಇಲಾಖೆಗಳೊಂದಿಗೆ ಸಮನ್ವಯ ಸಾಧಿಸಿ ಉದ್ದೇಶಿತ ಫಲಿತಾಂಶವನ್ನು ಪಡೆಯಲು ಸಹಕರಿಸುವುದು.

**2020-21 ನೇ ಸಾಲಿನಲ್ಲಿ ರಾಷ್ಟ್ರೀಯ ಆಹಾರ ಭದ್ರತಾ ಅಭಿಯಾನ -ಎಣ್ಣೆಕಾಳು ಅಡಿಯಲ್ಲಿ ಅನುಸರಿಸಬೇಕಾದ ಪ್ರಮುಖ ಘಟಕಗಳ ಮಾರ್ಗಸೂಚಿಗಳು ಈ ಕೆಳಗಿನಂತಿರುತ್ತದೆ.**

- ದೊಡ್ಡ ಪ್ರಮಾಣದ ಪ್ರಾತ್ಯಕ್ಷಿಕೆಗಳನ್ನು ಗುಚ್ಛ ಪ್ರಾತ್ಯಕ್ಷಿಕೆಗಳಾಗಿ, ಪ್ರತಿಜಿಲ್ಲೆಯಲ್ಲಿ ಏರ್ಪಡಿಸುವಂತೆ ಯೋಜಿಸಲಾಗಿದ್ದು, ಪ್ರಾತ್ಯಕ್ಷಿಕೆಗಾಗಿ ಕೃಷಿ ಪರಿಕರಗಳೊಂದಿಗೆ ಸುಧಾರಿತ ತಳಿಗಳ ಬಿತ್ತನೆ ಬೀಜವನ್ನು ರೈತರಿಗೆ ಒದಗಿಸಲು ಅವಕಾಶ

ಕಲ್ಪಿಸಲಾಗಿದೆ. ಹತ್ತು ವರ್ಷಗಳಿಂದೀಚೆಗೆ ಬಿಡುಗಡೆಯಾದ ತಳಿಗಳ ಬಿತ್ತನೆ ಬೀಜಗಳನ್ನು ಮಾತ್ರ ಪ್ರಾತ್ಯಕ್ಷತೆಗಳಲ್ಲಿ ವಿತರಿಸಲು ಅವಕಾಶವಿರುತ್ತದೆ.

- ಪ್ರಮಾಣಿತ ಬಿತ್ತನೆ ಬೀಜ ವಿತರಿಸಲು ಉದ್ದೇಶಿಸಿರುವ ಬೀಜಗಳು ಕಡ್ಡಾಯವಾಗಿ 10 ವರ್ಷದೊಳಗೆ ಅಧಿಕೃತವಾಗಿ ಬಿಡುಗಡೆಯಾಗಿರುವ ತಳಿಗಳಾಗಿದ್ದು ಪ್ರಮಾಣೀಕರಣಗೊಂಡಿರಬೇಕು.

**ಯೋಜನೆಯ ಪ್ರಮುಖ ಘಟಕಗಳು**

## I. ಬೀಜಘಟಕ

**1. ತಳಿ ವರ್ಧಕ ಬಿತ್ತನೆ ಬೀಜ ಖರೀದಿ**

ಕೇಂದ್ರ ಸರ್ಕಾರವು ರಾಜ್ಯದ ಕೃಷಿ ವಿಶ್ವವಿದ್ಯಾನಿಲಯಗಳು, ಇತರೆ ರಾಜ್ಯಗಳ ಕೃಷಿ ವಿಶ್ವವಿದ್ಯಾನಿಲಯಗಳಿಂದ ಹಾಗೂ ಸಂಶೋಧನಾ ಕೇಂದ್ರಗಳಿಂದ ತಳಿವರ್ಧಕ ಬಿತ್ತನೆ ಬೀಜವನ್ನು ಖರೀದಿಸುವ ಬೀಜ ಸಂಸ್ಥೆಗಳಿಗೆ ಮತ್ತು ಇಲಾಖಾ ಬೀಜೋತ್ಪಾದನಾ ಕೇಂದ್ರಗಳಿಗೆ ಖರೀದಿಸಿದ ಬೀಜಕ್ಕೆ ಪೂರ್ತಿ ಹಣವನ್ನು ಮರುಪಾವತಿ ಮಾಡಲು ಕೇಂದ್ರ ಸರ್ಕಾರವು ನೀಡಿರುವ ಆದೇಶದಂತೆ ನೀಡಲಾಗುವುದು ಹಾಗೂ ಸದರಿ ಘಟಕದ ವೆಚ್ಚವನ್ನು ಕೇಂದ್ರಕಛೇರಿಯಿಂದ ಭರಿಸಲಾಗುವುದು.

**2. ಪ್ರಮಾಣಿತ ಬಿತ್ತನೆ ಬೀಜ ವಿತರಣಾ ಕಾರ್ಯಕ್ರಮ**

ಪ್ರಮಾಣಿತ ಬಿತ್ತನೆ ಬೀಜದ ಬಳಕೆಯನ್ನು ಹೆಚ್ಚು ಪ್ರಚಾರ ಪಡಿಸುವ ಸಲುವಾಗಿ ರೈತರು ಖರೀದಿಸುವ ಪ್ರತಿ ಕ್ವಿಂಟಾಲ್ ಪ್ರಮಾಣಿತ ಬೀಜಕ್ಕೆ ಬೀಜದ ಶೇ.50ರಷ್ಟು ದರ ಅಥವಾ ಗರಿಷ್ಠ ರೂ.4000/-ಗಳ ಸಹಾಯಧನವನ್ನು (ನೆಲಗಡಲೆ ತಳಿಗೆ) ಮತ್ತು ಗರಿಷ್ಠ ರೂ.2000/-ಗಳ ಸಹಾಯ ಧನವನ್ನು (ಸೋಯಾಬೀನ್) ನೀಡಲಾಗುವುದು, ಹೈಬ್ರಿಡ್ ತಳಿಗಳಿಗೆ ಶೇ.50ರಷ್ಟು ರಿಯಾಯಿತಿ ದರದಲ್ಲಿ ಪ್ರತಿ ಕ್ವಿಂಟಾಲ್ ಗೆ ರೂ.8000/- ಕ್ಕೆ ಮೀರದಂತೆ ವಿತರಿಸುವುದು. (ಸದರಿ ಪ್ರಮಾಣಿತ ಬಿತ್ತನೆ ಬೀಜ ವಿತರಣೆಯನ್ನು ಬೀಜ ವಿಭಾಗದ ದರ ಕರಾರಿನ ಅನ್ವಯ ಅನುಷ್ಠಾನಗೊಳಿಸುವುದು)

ಪ್ರಮಾಣಿತ ಬಿತ್ತನೆ ಬೀಜ ವಿತರಿಸಲು ಉದ್ದೇಶಿಸಿರುವ ಬೀಜಗಳು ಕಡ್ಡಾಯವಾಗಿ 10 ವರ್ಷದೊಳಗೆ ಅಧಿಕೃತವಾಗಿ ಬಿಡುಗಡೆಯಾಗಿರುವ ತಳಿಗಳಾಗಿದ್ದು ಪ್ರಮಾಣೀಕರಣಗೊಂಡಿರಬೇಕು.

## II. ಪ್ರಾತ್ಯಕ್ಷಿಕೆಗಳು:

- ಎಣ್ಣೆ ಕಾಳು ಬೆಳೆಗಳಲ್ಲಿ ನೂತನ/ಸುಧಾರಿತ ಬೇಸಾಯ ಕ್ರಮಗಳನ್ನು ಅಳವಡಿಸಿ ಏಕ ಬೆಳೆ ಮತ್ತು ಬೆಳೆ ಪದ್ಧತಿ ಆಧಾರಿತ ಪ್ರಾತ್ಯಕ್ಷಿಕೆ ಗಳನ್ನು ಕೈಗೊಳ್ಳುವುದು.

- ಶೇ.30ರಷ್ಟು ಪ್ರಾತ್ಯಕ್ಷಿಕೆಗಳನ್ನು ಬೆಳೆ ಆಧಾರಿತ ಪದ್ಧತಿಗಳ ಮೇಲೆ ಆಯೋಜಿಸುವುದು. ಬೆಳೆ ಪದ್ಧತಿ ಪ್ರಾತ್ಯಕ್ಷಿಕೆಯಲ್ಲಿ ಬೆಳೆಗಳನ್ನು ಅನುಕ್ರಮವಾಗಿ ಅದೇ ತಾಕಿನಲ್ಲಿ ಬೆಳೆಯುದು.
- ಪ್ರತಿ ಬೆಳೆಯ ಪ್ರಾತ್ಯಕ್ಷಿಕೆಗಳನ್ನು ಕನಿಷ್ಠ 50 ಹೆಕ್ಟೇರ್ ಪ್ರದೇಶದಲ್ಲಿ ಕೈಗೊಳ್ಳುವುದು ಹಾಗೂ ಗುಚ್ಛ ಪ್ರಾತ್ಯಕ್ಷಿಕೆಯ (Cluster Demonstration) ಪದ್ಧತಿಯಲ್ಲಿ ಏರ್ಪಡಿಸುವುದು.
- ಪ್ರಾತ್ಯಕ್ಷಿಕೆ ಆಯೋಜನೆಯಲ್ಲಿ ಗ್ರಾಮ ಪಂಚಾಯತಿಯ ಸಹಕಾರದೊಂದಿಗೆ ಫಲಾನುಭವಿ ರೈತರನ್ನು ಆಯ್ಕೆ ಮಾಡುವುದು.
- ಪ್ರಾತ್ಯಕ್ಷಿಕೆಯನ್ನು ಆಯೋಜಿಸುವಾಗ ಪ್ರಾತ್ಯಕ್ಷಿಕೆ ಪ್ರದೇಶವನ್ನು ಎರಡು ಭಾಗಗಳಾಗಿ ವಿಂಗಡಿಸಿ ಒಂದು ಭಾಗದಲ್ಲಿ ಸುಧಾರಿತ ತಾಂತ್ರಿಕತೆಗಳನ್ನು ಅಳವಡಿಸುವುದು; ಮತ್ತೊಂದು ಭಾಗದಲ್ಲಿ ರೈತರು ಅಳವಡಿಸುವ ಪದ್ಧತಿಗಳೊಂದಿಗೆ ಚೆಕ್ ಪ್ಲಾಟ್ ಆಗಿ ನಿರ್ವಹಿಸುವುದು. ಕಡಿಮೆ ಇಳುವರಿ ಪ್ರದೇಶಗಳಿಗೆ ಆದ್ಯತೆ ನೀಡುವುದು.
- ಒಂದು ಗುಚ್ಚ ಪ್ರದೇಶದಲ್ಲಿ ಒಳಪಡುವ ಎಲ್ಲಾ ರೈತರನ್ನು ಪ್ರಾತ್ಯಕ್ಷಿಕೆಯಲ್ಲಿ ತೊಡಗಿಸುವುದು. ಪ್ರತಿ ರೈತರ ಕನಿಷ್ಟ 1.0 ಹೆ. ಪ್ರದೇಶವನ್ನು ಗುಚ್ಛದಲ್ಲಿ ಸೇರ್ಪಡೆಗೊಳಿಸುವುದು.
- ಎಣ್ಣೆಕಾಳು ಬೆಳೆಗಳಲ್ಲಿ ಅಂತರ ಬೆಳೆ/ಸುಧಾರಿತ ತಳಿಗಳ/ಕೂರಿಗೆ ಬಿತ್ತನೆ ಪ್ರಾತ್ಯಕ್ಷಿಕೆಗಳನ್ನು ಏರ್ಪಡಿಸುವುದು.
- ಬೆಳೆ ಪದ್ಧತಿಗಳ (ಎಣ್ಣೆಕಾಳು ಬೆಳೆ ಮುಖ್ಯ ಬೆಳೆಯಾಗಿ) ಬಗ್ಗೆ ಮತ್ತು ಅಂತರ ಬೆಳೆಯಾಗಿ ಪ್ರಾತ್ಯಕ್ಷಿಕೆಗಳನ್ನು ಆಯೋಜಿಸುವುದು.
- ಎಣ್ಣೆಕಾಳು ಬೆಳೆಗಳಲ್ಲಿ ಜೇನು ಸಾಕಣೆಯನ್ನು ಉತ್ತೇಜಿಸುವ ನಿಟ್ಟಿನಲ್ಲಿ ಸೂರ್ಯಕಾಂತಿ ಬೆಳೆಯಲ್ಲಿ ಪ್ರತಿ ಹೆ ಗೆ ರೂ 2000/- ಜೇನುಪೆಟ್ಟಿಗೆ ಖರೀದಿಸಲು ಪ್ರತ್ಯೇಕವಾಗಿ ನೀಡಲಾಗಿದೆ.
- ಸುಧಾರಿತ ತಾಂತ್ರಿಕತೆಗಳ ಬಗ್ಗೆ ಸ್ಥಳೀಯ ಸಂಶೋಧನಾ ಕೇಂದ್ರ / ಕೃಷಿ ವಿಜ್ಞಾನ ಕೇಂದ್ರಗಳ ವಿಜ್ಞಾನಿಗಳೊಂದಿಗೆ ಸಮಾಲೋಚಿಸಿ ಅಂತಹ ತಾಂತ್ರಿಕತೆಗಳ ಕುರಿತು ಪ್ರಾತ್ಯಕ್ಷಿಕೆಗಳನ್ನು ಆಯೋಜಿಸುವುದು.
- ಪ್ರಾತ್ಯಕ್ಷಿಕೆಯ ವಿವರಣಾ ಫಲಕ (Display board) ದಲ್ಲಿ ರೈತರ ಸಂಖ್ಯೆ, ಹಳ್ಳಿಯ ಹೆಸರು, ತಳಿ ಮತ್ತು ಪ್ರಾತ್ಯಕ್ಷಿಕೆಯ ವಿವರ, ಬಳಸಲಾದ ಪೋಷಕಾಂಶಗಳು, ಬಿತ್ತನೆ ಬೀಜ ಪ್ರಮಾಣ, ಬೆಳೆಯೇತರ ಬಳಸಲಾದ ಪರಿಕರಗಳು ಇತ್ಯಾದಿಗಳ ಬಗ್ಗೆ ಮಾಹಿತಿ ನಮೂದಿಸುವುದು.
- ಜಿಲ್ಲೆಯ ಪ್ರಾತ್ಯಕ್ಷಿಕೆಯ ಸಮಗ್ರ ವರದಿಯನ್ನು ನಿಯತಕಾಲಿಕವಾಗಿ ನಿಗದಿತ ನಮೂನೆಯಲ್ಲಿ ಕೇಂದ್ರ ಕಛೇರಿಗೆ ಕಳುಹಿಸುವುದು.
- ಬೆಳೆಯು ಕಾಳು ತುಂಬುವ ಹಂತದಲ್ಲಿರುವಾಗ (Pod filling stage) ಕ್ಷೇತ್ರೋತ್ಸವವನ್ನು ಆಚರಿಸುವುದು.
- ಸದರಿ ಯೋಜನೆಯಡಿ ಕಾರ್ಯಕ್ರಮ ಹಮ್ಮಿಕೊಳ್ಳಲು ಆತ್ಮ ಸಿಬ್ಬಂದಿಯ ನೆರವನ್ನು ಪಡೆಯುವುದು.

ಪ್ರಾತ್ಯಕ್ಷಿತೆಗಳ ಉಸ್ತುವಾರಿ ಮತ್ತು ದಾಖಲೀಕರಣ:

- ಪ್ರಾತ್ಯಕ್ಷಿತೆಗಳ ವಿವಿಧ ಘಟಕಗಳ ಅನುಷ್ಠಾನ, ಉಸ್ತುವಾರಿ ಮತ್ತು ದಾಖಲೀಕರಣಕ್ಕೆ ಸಂಬಂಧಿಸಿದಂತೆ ಈ ಕೆಳಗೆ ತಿಳಿಸಿರುವ ಸೂಚನೆಗಳನ್ನು ಪಾಲಿಸುವುದು.

- ಪ್ರಾತ್ಯಕ್ಷಿಕೆಗಳಿಗೆ ಆಯ್ಕೆ ಮಾಡಲಾಗುವ ಫಲಾನುಭವಿಗಳಿಗೆ ಇಲಾಖೆಯ FRUITS ತಂತ್ರಾಂಶದಲ್ಲಿ ರೈತರ ನೊಂದಣಿ ಕಡ್ಡಾಯ.
- ಪ್ರಾತ್ಯಕ್ಷಿಕೆಗಳಿಗೆ ಆಯ್ಕೆ ಮಾಡಲಾಗುವ ಫಲಾನುಭವಿಗಳ ದಾಖಲಾತಿ ಮತ್ತು ಉಸ್ತುವಾರಿಯನ್ನು NFSM- Krishi kisan app & ಕೆ -ಕಿಸಾನ್ Web portal ಮೂಲಕ ನಿರ್ವಹಿಸುವುದು. ಪ್ರಾತ್ಯಕ್ಷಿಕೆ ಮಾಹಿತಿಯನ್ನು ಆಯಾ ಹಂಗಾಮಿನಲ್ಲಿ ಸಕಾಲದಲ್ಲಿ ಹಾಗೂ ನಿಯತಕಾಲಿಕವಾಗಿ Mobile (GPS CO-ordinate ಸಹಿತ) NFSM- Krishi kisan app ನಲ್ಲಿ & Web portal ನಲ್ಲಿ ಅಪ್ ಲೋಡ್ ಮಾಡಲು ಕ್ರಮ ವಹಿಸುವುದು.
- ಈ ಮೂಲಕ ಪ್ರಾತ್ಯಕ್ಷಿಕೆಗಳ ನಿರ್ವಹಣೆಗೆ ಜಿಲ್ಲಾಮಟ್ಟದಲ್ಲಿ ನೋಡಲ್ ಮತ್ತು ಸಹಾಯಕ ನೋಡಲ್ ಅಧಿಕಾರಿಗಳನ್ನು ನಿಯೋಜಿಸಿ ಮಾಹಿತಿಯನ್ನು ಕೇಂದ್ರ ಕಛೇರಿಗೆ ಸಲ್ಲಿಸುವುದು.
- ಪ್ರಾತ್ಯಕ್ಷಿಕೆಯ ವಿವರಗಳ ದಾಖಲಾತಿಗಳನ್ನೊಳಗೊಂಡ (ಛಾಯಚಿತ್ರಗಳು ಇತ್ಯಾದಿ) ಪ್ರತ್ಯೇಕ ವಹಿಯನ್ನು -ಆಯಾ ರೈತ ಸಂಪರ್ಕ ಕೇಂದ್ರಗಳಲ್ಲಿ ನಿರ್ವಹಿಸುವುದು. NFSM-OS ಯೋಜನೆಯಡಿ ಜಿಲ್ಲೆಯಲ್ಲಿ ಕೈಗೊಳ್ಳಲಾಗುವ ಎಲ್ಲಾ ಪ್ರಾತ್ಯಕ್ಷಿಕೆಗಳ ವಿವರಗಳನ್ನು ಕ್ರೋಢಿಕರಿಸಿ ಮಾಹಿತಿಯು ಸಕಾಲದಲ್ಲಿ ಲಭ್ಯವಿರುವಂತೆ ಕ್ರಮ ವಹಿಸುವುದು.

**ಸೂಚನೆ: ಪ್ರಾತ್ಯಕ್ಷಿಕೆಗಳಿಗೆ 10 ವರ್ಷಗಳ ಒಳಗಿನ ತಳಿ/ಸಂಕರಣ ಬಿತ್ತನೆ ಬೀಜಗಳನ್ನು ಬಳಸಬಹುದಾಗಿದೆ.**

**ಎನ್.ಎಫ್.ಎಸ್.ಎಂ ಯೋಜನೆಯ ವಿವಿಧ ಕಾರ್ಯಕ್ರಮಗಳಡಿ ಗುಚ್ಛ ಪ್ರಾತ್ಯಕ್ಷಿಕೆಗಳ ಚಟುವಟಿಕೆಗಳು ಮತ್ತು ವೆಚ್ಚವನ್ನು ಅನುಬಂಧ-1 ರಲ್ಲಿ ನೀಡಲಾಗಿದೆ.**

ಪ್ರಾತ್ಯಕ್ಷಿತೆಗಳ ಅನುಷ್ಠಾನ:

ಪ್ರಾತ್ಯಕ್ಷಿತೆಗಳಲ್ಲಿನ ಘಟಕಗಳನ್ನು ರೈತ ಸಂಪರ್ಕ ಕೇಂದ್ರಗಳಲ್ಲಿ ಕಿರುಚೀಲ ಮಾದರಿಯಲ್ಲಿ (ಕಿಟ್) ವಿತರಿಸಲು ಕ್ರಮವಹಿಸುವುದು.

**ಮೊದಲನೆ ಹಂತವಾಗಿ (ಕಿಟ್-1):** ಬೀಜೋಪಚಾರ ಔಷಧಿ, ಜೈವಿಕ ಗೊಬ್ಬರ ಹಾಗೂ ಸಿಟಿ ಕಾಂಪೋಸ್ಟ್/ ಎರೆಹುಳುಗೊಬ್ಬರ ಮೊದಲನೆ ಹಂತವಾಗಿ (ಮುಂಗಾರು ಬೆಳೆಗಳಿಗೆ ಜುಲೈ 15 ರೊಳಗೆ ಹಾಗೂ ಹಿಂಗಾರು ಬೆಳೆಗಳಿಗೆ ಅಕ್ಟೋಬರ್ ಅಂತ್ಯಕ್ಕೆ ಅಂತಿಮಗೊಳಿಸುವುದು)

**ಎರಡನೇ ಹಂತವಾಗಿ(ಕಿಟ್-2):**, ಲಘು ಪೋಷಕಾಂಶಗಳು, ಕಳೆನಾಶಕ, ಎಲೆ ಮೇಲೆ ಸಿಂಪಡಿಸುವ ಲಘು ಪೋಷಕಾಂಶಗಳು, ಕೀಟನಾಶಕ (ಮುಂಗಾರು ಬೆಳೆಗಳಿಗೆ ಆಗಸ್ಟ್ 15ರ ಒಳಗೆ ಹಾಗೂ ಹಿಂಗಾರು ಬೆಳೆಗಳಿಗೆ ನವೆಂಬರ್ ಅಂತ್ಯಕ್ಕೆ ಅಂತಿಮಗೊಳಿಸುವುದು)

ಪ್ರಾತ್ಯಕ್ಷಿಕೆಗಳಿಗೆ ಮಾಡಬಹುದಾದ ವೆಚ್ಚ ಮತ್ತು ಪ್ರೇರಕಗಳ ಬಗ್ಗೆ ವಿವರಗಳನ್ನು ಅನುಬಂಧ -1 & 2 ರಲ್ಲಿ ನೀಡಲಾಗಿದೆ. ಪ್ರಾತ್ಯಾಕ್ಷಿಕೆಗಳಿಗೆ ನೀಡಬೇಕಾದ ಪರಿಕರಗಳು ಹಾಗೂ ವೇಳಾಪಟ್ಟಿ ಮುಖಾಂತರ ಪಾವತಿಸಬಹುದಾದ ವಿವರಗಳನ್ನು ಅನುಬಂಧ -3 ರಲ್ಲಿ ನೀಡಲಾಗಿದೆ

## III. ಬೀಜೇತರ ಘಟಕಗಳು (ಉತ್ಪಾದನಾ ಪರಿಕರಗಳು)

### 1. ಜಿಪ್ಸಂ - ಪೈರೇಟ್ಸ್/ಲೈಮಿಂಗ್/ಡೊಲೊಮೈಟ್/ಸಿಂಗಲ್ ಸೂಪರ್ ಫಾಸ್ಫೇಟ್ ವಿತರಣೆ

ಈ ಕಾರ್ಯಕ್ರಮದ ಮೂಲಕ ಎಣ್ಣೆಕಾಳು ಬೆಳೆಗಳಲ್ಲಿ ಅದರಲ್ಲೂ ಮುಖ್ಯವಾಗಿ ನೆಲಗಡಲೆ ಬೆಳೆಗೆ ಜಿಪ್ಸಂ ಲವಣವನ್ನು ಸರಬರಾಜು ಮಾಡಲಾಗುವುದು. ಜಿಪ್ಸಂ ಸರಬರಾಜಿನಲ್ಲಿ ಸಾಗಾಣಿಕೆ ವೆಚ್ಚವು ಅತೀ ಹೆಚ್ಚಾಗಿರುವುದರಿಂದ ಸಾಗಾಣಿಕೆ ವೆಚ್ಚದ ಭಾರವನ್ನು ರೈತರಿಗೆ ಕಡಿಮೆ ಮಾಡಲು ಈ ಪರಿಕರದ ಶೇಕಡ 50 ರಷ್ಟು ಬೆಲೆ ( ಸಾಗಾಣಿಕೆ ವೆಚ್ಚವೂ ಸೇರಿ) ಪ್ರತಿ ಹೆಕ್ಟೇರಿಗೆ ಗರಿಷ್ಠ ರೂ. 750/- ಗಳ ಸಹಾಯಧನವನ್ನು ಒದಗಿಸಲಾಗುವುದು. ಈ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸುವಾಗ 10 ಹೆ ವಿಸ್ತೀರ್ಣ ಸಾಧ್ಯವಾದ ಮಟ್ಟಿಗೆ ಒಂದೇ ತಾಕಿನಲ್ಲಿ ಬರುವಂತೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳುವುದು.

### 2. ರೈಜೋಬಿಯಂ ಜೀವಾಣು ಹಾಗೂ ಪಿ.ಎಸ್.ಬಿ.ಸರಬರಾಜು

ನೆಲಗಡಲೆ ಮತ್ತು ಸೋಯಾ ಅವರೆಗಳ ಉತ್ಪಾದನೆಯನ್ನು ಹೆಚ್ಚಿಸುವಲ್ಲಿ ರೈಜೋಬಿಯಂ ಹಾಗೂ ಎಣ್ಣೆಕಾಳು ಬೆಳೆಗಳಿಗೆ ಪಿ.ಎಸ್.ಬಿ ಜೀವಾಣುಗಳು ಅಗ್ಗದ ಪರಿಕರವಾಗುತ್ತದೆ. ರೈಜೋಬಿಯಂ ವಾತಾವರಣದಲ್ಲಿರುವ ಸಾರಜನಕವನ್ನು ಹಾಗೂ ಪಿ.ಎಸ್.ಬಿ ಜೀವಾಣು ಭೂಮಿಯಲ್ಲಿರುವ ರಂಜಕವನ್ನು ಕರಗದ ಸ್ಥಿತಿಯಿಂದ ಕರಗುವ ಸ್ಥಿತಿಗೆ ತರಲು ಸಹಾಯ ಮಾಡುತ್ತದೆ. ಇದರಿಂದ ಇಳುವರಿ ಸಹ ಹೆಚ್ಚುತ್ತದೆ. ಈ ಜೀವಾಣುಗಳಿಗೆ ಶೇ 50ರ ಬೆಲೆಯ ಅಥವಾ ಹೆಕ್ಟೇರ್ ಒಂದಕ್ಕೆ ಗರಿಷ್ಠ 300/- ರೂ. ಗಳ ಸಹಾಯಧನವನ್ನು ನೀಡಿ ವಿತರಿಸುವುದು.

### 3. ರಾಸಾಯನಿಕ ಪೀಡೆನಾಶಕ / ಲಘುಪೋಷಕಾಂಶಗಳ ಸರಬರಾಜು.

ರಾಸಾಯನಿಕ ಪೀಡೆನಾಶಕ/ ಶೀಲಿಂಧ್ರನಾಶಕ/ ಬಯೋ(ಜೈವಿಕ) ಪೆಸ್ಟಿಸೈಡ್/ ಬಯೋಏಜೆಂಟ್ಸ್/ ಕಳೆನಾಶಕ/ ಲಘುಪೋಷಕಾಂಶಗಳ ಸರಬರಾಜು ಔಷಧಿಗಳನ್ನು ಸರಬರಾಜು ಮಾಡಲು ಶೇ 50ರ ಸಹಾಯಧನ ಅಥವಾ ಹೆ. ಗೆ ಗರಿಷ್ಠ ರೂ. 500/- ಗಳನ್ನು ಮೀರದಂತೆ ಸಹಾಯಧನವನ್ನು ಕಲ್ಪಿಸಲಾಗಿದೆ.

### 4. ಸಸ್ಯ ಸಂರಕ್ಷಣಾ ಸಿಂಪರಣಾ ಉಪಕರಣಗಳ ಸರಬರಾಜು

ಎಲ್ಲಾ ಎಣ್ಣೆಕಾಳು ಬೆಳೆಗಳಿಗೆ ಕೀಟ ರೋಗ ಬಾಧೆಯ ರಕ್ಷಣೆಗಾಗಿ ಸಕಾಲದಲ್ಲಿ ಸಿಂಪರಣಾ ಕಾರ್ಯಕ್ರಮ ತೆಗೆದುಕೊಳ್ಳಲು ಈ ಕಾರ್ಯಕ್ರಮವನ್ನು ರೂಪಿಸಲಾಗಿದೆ.

## ಸಸ್ಯ ಸಂರಕ್ಷಣಾ ಸಿಂಪರಣಾ ಉಪಕರಣಗಳು

**ಶಕ್ತಿ ಚಾಲಿತ ಸಿಂಪರಣಾ ಉಪಕರಣ:** ರೈತರಿಗೆ ಪ್ರತಿ ನ್ಯಾಪ್ಸ್ಯಾಕ್ & ತೈವಾನ್ ಶಕ್ತಿ ಚಾಲಿತ (16 ಲೀಟರ್ ಸಾಮರ್ಥ್ಯಕ್ಕಿಂತ ಕಡಿಮೆ) ಉಪಕರಣದ ಶೇ 40 ರ ದರ ಅಥವಾ ಗರಿಷ್ಠ ರೂ. 3000/- ಗಳು ಯಾವುದು ಕಡಿಮೆಯೋ ಅದರಂತೆ ಸಹಾಯಧನ ನೀಡಲಾಗುವುದು. (ಸಣ್ಣ ಮತ್ತು ಅತಿಸಣ್ಣ, ಪರಿಶಿಷ್ಟ ಜಾತಿ. ಪರಿಶಿಷ್ಟ ಪಂಗಡ ಹಾಗೂ ರೈತ ಮಹಿಳೆಯರಿಗೆ ಹೆಚ್ಚುವರಿಯಾಗಿ ಶೇ 10 ರ ಸಹಾಯಧನ ಅಥವಾ ಗರಿಷ್ಠ ರೂ. 3800/- ಗಳು)

## IV. ಸುಧಾರಿತ ಕೃಷಿ ಉಪಕರಣಗಳ ಸರಬರಾಜು:

**ಡೀಸೆಲ್ ಪಂಪ್ ಸೆಟ್:** ರೈತರಿಗೆ ಡೀಸೆಲ್ ಪಂಪ್ ಸೆಟ್ ಖರೀದಿಸಲು ಶೇ 40 ರ ಹಾಗೂ ಶೇ.50 ರ ದರದಲ್ಲಿ ಗರಿಷ್ಠ ರೂ. 22500 ರಿಂದ 27000/- ಗಳು ಯಾವುದು ಕಡಿಮೆಯೋ ಅದರಂತೆ ಸಹಾಯಧನ ನೀಡುವುದು.

**ಸಣ್ಣ ಪ್ರಮಾಣದ ಎಣ್ಣೆಗಾಣಗಳು:** ಶುದ್ಧ ಎಣ್ಣೆ ಉಪಯೋಗಿಸಲು ಹಾಗೂ ಉದ್ದಿಮೆದಾರರನ್ನಾಗಿ ರೂಪಿಸಲು (0.5 ಹೆಚ್.ಪಿ ಇಂದ 2 ಹೆಚ್.ಪಿ ವರೆಗೆ) ಶೇ 50 ರ ರಿಯಾಯಿತಿ ದರದಲ್ಲಿ ಖರೀದಿಸಲು ಅವಕಾಶ ಕಲ್ಪಿಸಲಾಗಿದೆ.

**ಕೃಷಿ ಯಂತ್ರೋಪಕರಣಗಳು ಸಸ್ಯ ಸಂರಕ್ಷಣಾ ಉಪಕರಣಗಳ ಫಲಾನುಭವಿಗಳನ್ನು ರಾಷ್ಟ್ರೀಯ ಆಹಾರ ಭದ್ರತಾ ಅಭಿಯಾನ - ಎಣ್ಣೆ ಕಾಳು ಯೋಜನೆಯಡಿ ಆಯ್ಕೆ ಮಾಡುವಲ್ಲಿ ಅನುಸರಿಸಂಬೇಕಾದ ಮಾನದಂಡಗಳು**

1. 2020-21 ನೇ ಸಾಲಿನ ಕೇಂದ್ರ ಕಛೇರಿಯಿಂದ ಅನುಮೋದನೆಗೊಂಡಿರುವ ಸಂಸ್ಥೆಗಳಿಂದ / ವಿತರಕರಿಂದ ಖರೀದಿಸಿದ ಮಾದರಿಗಳು ಮಾತ್ರ ಸಹಾಯಧನ ಪಡೆಯಲು ಅರ್ಹರಾಗಿರುತ್ತವೆ.
2. ರೈತರು ಸಹಾಯಧನದಡಿ ಸವಲತ್ತನ್ನು ಪಡೆಯಲು ನಿಗದಿತ ನಮೂನೆಯಲ್ಲಿ ಸಂಬಂಧಿಸಿದ ದಾಖಲೆಗಳೊಂದಿಗೆ (ಪಹಣಿ/ಹಿಡುವಳಿ ಪತ್ರ, ಜಾತಿ ಪ್ರಮಾಣ ಪತ್ರ) ರೈತ ಸಂಪರ್ಕ ಕೇಂದ್ರದ ಮುಖ್ಯಸ್ಥರಿಗೆ ಅರ್ಜಿ ಸಲ್ಲಿಸಿದ ಎಲ್ಲಾ ರೈತರಿಗೆ ಸ್ವೀಕೃತಿ ಪತ್ರ ನೀಡುವುದು.
3. ರೈತ ಸಂಪರ್ಕ ಕೇಂದ್ರದಲ್ಲಿ ಸ್ವೀಕೃತವಾದ ಎಲ್ಲಾ ಅರ್ಜಿಗಳ ವಿವರಗಳನ್ನು ಜೇಷ್ಠತೆಯಲ್ಲಿ ಪ್ರತ್ಯೇಕ ವಹಿಯಲ್ಲಿ ದಾಖಲಿಸುವುದು.
4. ರೈತರು ರೈತ ಸಂಪರ್ಕ ಕೇಂದ್ರಕ್ಕೆ ಸಲ್ಲಿಸಿದ ಅರ್ಜಿಗಳನ್ನು ಪರಿಶೀಲಿಸಿ ನಂತರ ಸಹಾಯಕ ಕೃಷಿ ನಿರ್ದೇಶಕರ ಕಛೇರಿಗೆ ಸಲ್ಲಿಸುವುದು.

5. ಸಹಾಯಕ ಕೃಷಿ ನಿರ್ದೇಶಕರು, ರೈತರು ಇಚ್ಛಿಸಿದ ಉಪಕರಣ ಪಡೆಯಲು (ಇಲಾಖೆಯಲ್ಲಿ ಅನುಮೋದಿಸಿರುವ ಪಟ್ಟಿಯಲ್ಲಿ ಇರುವಂತೆ) ನಿಗದಿಪಡಿಸಿರುವ ಕಾರ್ಯಕ್ರಮದನ್ವಯ ಹಾಗೂ ಅನುದಾನದ ಲಭ್ಯತೆ ಮತ್ತು ಜೇಷ್ಠತೆ ಆಧಾರದ ಮೇಲೆ ಅರ್ಹ ಫಲಾನುಭವಿಯನ್ನು ಆಯ್ಕೆ ಮಾಡುವುದು.

## V. ತರಬೇತಿಗಳು

1. ರೈತರ ತರಬೇತಿಗಳು:

| ಕ್ರ.ಸಂ | ಘಟಕಗಳು | ಧರ | ಮೊತ್ತ |
|---|---|---|---|
| 1. | ತರಬೇತಿ ಸಾಮಗ್ರಿಗಳು, ಶ್ರವಣ ದೃಶ್ಯ ಸಾಮಗ್ರಿಗಳು/ ಸಭಾಂಗಣ ವೆಚ್ಚ | ರೂ. 2500/ ತರಬೇತಿ | 2500.00 |
| 2. | ರೈತರಿಗೆ ಪ್ರಯಾಣ/ಸಾರಿಗೆ ವೆಚ್ಚ | ರೂ. 4500/ ತರಬೇತಿ | 4500.00 |
| 3. | ವಿಷಯ ತಜ್ಞರಿಗೆ ಗೌರವ ಧನ | ರೂ. 250/ ಉಪನ್ಯಾಸ ( ಎರಡು ದಿನ 8 ಉಪನ್ಯಾಸ) | 2000.00 |
| 4. | ಊಟ /ಉಪಹಾರ /ಟೀ,ಕಾಫಿ ವೆಚ್ಚ | ರೂ. 250/ ದಿನ X X 2 ದಿನ X 30 ರೈತರು) | 15000.00 |
| | ಒಟ್ಟು | | **24000.00** |

2. ಅಧಿಕಾರಿಗಳ ತರಬೇತಿಗಳು:

| ಕ್ರ.ಸಂ | ಘಟಕಗಳು | ಧರ | ಮೊತ್ತ |
|---|---|---|---|
| 1. | ತರಬೇತಿ ಸಾಮಗ್ರಿಗಳು | ರೂ. 5000/ ತರಬೇತಿ | 5000.00 |
| 2. | ವಾಹನ ಬಾಡಿಗೆ / ಇಂಧನ ವೆಚ್ಚ | ರೂ. 15000/ ತರಬೇತಿ | 15000.00 |
| 3. | ವಿಷಯತಜ್ಞರಿಗೆ ಗೌರವ ಧನ | ರೂ. 500/ ಉಪನ್ಯಾಸ ( ಎರಡು ದಿನ 8 ಉಪನ್ಯಾಸ) | 4000.00 |
| 4. | ಊಟ /ಉಪಹಾರ /ಟೀ,ಕಾಫಿ ವೆಚ್ಚ | ರೂ. 300/ ದಿನ X X 2 ದಿನ X 20 ಅಧಿಕಾರಿಗಳು) | 12000.00 |
| | ಒಟ್ಟು | | **36000.00** |

01/07/20
ಕೃಷಿ ಆಯುಕ್ತರು

ಲಗತ್ತು:

**ಅನುಬಂಧ-1:** 2020-21 ನೇ ಸಾಲಿನ ಎನ್.ಎಫ್.ಎಸ್.ಎಂ ಯೋಜನೆಯ ವಿವಿಧ ಕಾರ್ಯಕ್ರಮಗಳಡಿ ವಿವಿಧ ಪರಿಕರಗಳ ವಿತರಣೆಗೆ ಸಹಾಯಧನ ವಿವರ.

**ಅನುಬಂಧ-2:** ವಿವಿಧ ಕಾರ್ಯಕ್ರಮಗಳಡಿ ಪ್ರಾತ್ಯಕ್ಷಿಕೆಗಳಿಗೆ ಮಾಡಬಹುದಾದ ವೆಚ್ಚ ಮತ್ತು ಪ್ರೇರಕಗಳ ಬಗ್ಗೆ ವಿವರಗಳು

**ಅನುಬಂಧ-3:** ವಿವಿಧ ಪ್ರಾತ್ಯಕ್ಷಿಕೆಗಳಿಗೆ ನೀಡಬೇಕಾದ ಪರಿಕರಗಳ ವಿವರಗಳು ಹಾಗೂ ವೇಳಾಪಟ್ಟಿ

**ಅನುಬಂಧ-4** : ಎನ್.ಎಫ್.ಎಸ್.ಎಂ ಯೋಜನೆಯ ವಿವಿಧ ಕಾರ್ಯಕ್ರಮಗಳ ಜಿಲ್ಲಾವಾರು ಘಟಕವಾರು ಕ್ರಿಯಾಯೋಜನೆಯ ಘೋಷ್ವಾರೆ

**ಅನುಬಂಧ-4(A)** : ಎನ್.ಎಫ್.ಎಸ್.ಎಂ ಯೋಜನೆಯ ವಿವಿಧ ಕಾರ್ಯಕ್ರಮಗಳ ಜಿಲ್ಲಾವಾರು ಘಟಕವಾರು ವರ್ಗವಾರು ವಿವರವಾದ ಕ್ರಿಯಾಯೋಜನೆ

# ಅನುಬಂಧ-1

1. ಎನ್.ಎಫ್.ಎಸ್.ಎಂ (ಎಣ್ಣೆಕಾಳು) ಯೋಜನೆಯಡಿ ವಿವಿಧ ಪರಿಕರಗಳ ವಿತರಣೆಗೆ ಸಹಾಯಧನ ವಿವರ

| ಸಂ | ಘಟಕ | ಶೇ.50 ರ ಅನುಮೋದಿತ ಗರಿಷ್ಠ ಸಹಾಯಧನ |
|---|---|---|
| 1 | ಸಮಗ್ರ ಪೋಷಕಾಂಶ ನಿರ್ವಹಣೆ | |
| | ಅ) ಜಿಪ್ಸಂ/ ಕೃಷಿ ಸುಣ್ಣ/ssp/ಪೈರೇಟ್ | ಪ್ರತಿ ಹೆಕ್ಟೇರ್ ಗೆ ರೂ.750/- |
| | ಆ) ಜೈವಿಕ ಗೊಬ್ಬರ | ಪ್ರತಿ ಹೆಕ್ಟೇರ್ ಗೆ ರೂ.300/- |
| | ಇ) ಲಘು ಪೋಷಕಾಂಶಗಳು | ಪ್ರತಿ ಹೆಕ್ಟೇರ್ ಗೆ ರೂ.500/- |
| 2 | ಸಸ್ಯ ಸಂರಕ್ಷಣೆ ನಿರ್ವಹಣೆ | |
| | ಅ) ಸಸ್ಯ ಸಂರಕ್ಷಣಾ ಔಷಧಿಗಳು/ ಜೈವಿಕ ನಿಯಂತ್ರಣಕಾರಕಗಳು/ಕಳೆನಾಶಕಗಳು | ಪ್ರತಿ ಹೆಕ್ಟೇರ್ ಗೆ ರೂ.500/- |
| | ಆ) ಎನ್.ಪಿ.ವಿ | ಪ್ರತಿ ಹೆಕ್ಟೇರ್ ಗೆ ರೂ.500/- |
| 3 | ಸಂಪನ್ಮೂಲ ಸಂರಕ್ಷಣಾ ತಾಂತ್ರಿಕತೆಗಳು/ ಸಾಧನಗಳು | |
| | ಶಕ್ತಿ ಚಾಲಿತ ಸಿಂಪರಣಾ ಯಂತ್ರ | ಪ್ರತಿ ಘಟಕಕ್ಕೆ ರೂ.3800/- |
| | ಸಣ್ಣ ಎಣ್ಣೆಗಾಣದ ಯಂತ್ರ (0.5 ರಿಂದ 0.6 ಹೆಚ್.ಪಿ) | ಪ್ರತಿ ಘಟಕಕ್ಕೆ ರೂ.17000 (ರೂ. 34000/-ರ ಶೇ 50) |
| | ಸಣ್ಣ ಎಣ್ಣೆಗಾಣದ ಯಂತ್ರ (1 ಹೆಚ್.ಪಿ) | ಪ್ರತಿ ಘಟಕಕ್ಕೆ ರೂ.25000/- (ರೂ. 50000/-ರ ಶೇ 50) |
| | ಸಣ್ಣ ಎಣ್ಣೆಗಾಣದ ಯಂತ್ರ (2 ಹೆಚ್.ಪಿ) | ಪ್ರತಿ ಘಟಕಕ್ಕೆ ರೂ.67500/- (ರೂ. 135000/-ರ ಶೇ 50) |
| 4 | ಸ್ಥಳೀಯ ಪ್ರೇರಕಗಳು | |
| | ಅ) ಡೀಸೆಲ್ ಪಂಪ್ ಸೆಟ್ | ಪ್ರತಿ ಘಟಕಕ್ಕೆ ರೂ.22500-27000/- |
| 5 | ಇತರೆ ವೆಚ್ಚಗಳು | |
| | ಅ) ಸಾದಿಲ್ವಾರು ವೆಚ್ಚ ರಾಜ್ಯ/ಜಿಲ್ಲೆ | ರೂ 8.92 ಲಕ್ಷ |
| | ಆ) ರಾಜ್ಯ ಮಟ್ಟದ Technical Support Group(TSG) | ರೂ6.00 ಲಕ್ಷಗಳು |
| | ಇ) ವಾಹನ ಬಾಡಿಗೆ/ ಯೋಜನೆಯ ಉಸ್ತುವಾರಿ | ರೂ6.46 ಲಕ್ಷಗಳು |

01/07/20

ಕೃಷಿ ಆಯುಕ್ತರು

# ಅನುಬಂಧ-2

## ಎನ್.ಎಫ್.ಎಸ್.ಎಂ(ಎಣ್ಣೆಕಾಳು) ಯೋಜನೆಯ ವಿವಿಧ ಬೆಳೆಗಳಲ್ಲಿ ಗುಚ್ಛ ಪ್ರಾತ್ಯಕ್ಷಿಕೆಗಳು: ಚಟುವಟಿಕೆಗಳು ಮತ್ತು ವೆಚ್ಚ.

1. ನೆಲಗಡಲೆ ಪ್ರಾತ್ಯಕ್ಷಿಕೆ :

(**ಶೇ.50%** ರಿಯಾಯಿತಿ ದರದಲ್ಲಿ ಪರಿಕರ ವಿತರಣೆ ಗರಿಷ್ಠ ಮೊತ್ತ ಪ್ರತಿ ಹೆಕ್ಟೇರಿಗೆ ರೂ.10000/-)

| ಕ್ರ.ಸಂ | ಪರಿಕರಗಳು | ಸಹಾಯಧನದಮೊತ್ತ |
|---|---|---|
| 1. | ಬಿತ್ತನೆ ಬೀಜ(110 ಕೆ.ಜಿ) ರೂ.50/ಕೆ.ಜಿ | 5500.00 |
| 2. | ಬೀಜೋಪಚಾರ ಔಷಧಿ | 200.00 |
| 3. | ಜೀವಾಣು/ಜೈವಿಕ ಗೊಬ್ಬರ | 200.00 |
| 4. | ಲಘು ಪೋಷಕಾಂಶ /ಸಿಟಿ ಕಾಂಪೋಸ್ಟ್/ಎರೆಹುಳು ಗೊಬ್ಬರ | 1000.00 |
| 5. | ಸಸ್ಯ ಸಂರಕ್ಷಣಾ ಔಷಧಿ | 1800.00 |
| 6. | ವಿಜ್ಞಾನಿಗಳ ಭೇಟಿ | 300.00 |
| 7. | ಪ್ರಚಾರ/ಕ್ಷೇತ್ರೋತ್ಸವ/ನಾಮಫಲಕ/ಮುದ್ರಿತ ಪುಸ್ತಕ ಸಾಮಗ್ರಿ | 1000.00 |
| | ಒಟ್ಟು | **10000.00** |

2.**ಸೋಯಾಅವರೆ ಪ್ರಾತ್ಯಕ್ಷಿಕೆ** : (ಶೇ.50% ರಿಯಾಯಿತಿ ದರದಲ್ಲಿ ಪರಿಕರ ವಿತರಣೆ ಗರಿಷ್ಠ ಮೊತ್ತ ಪ್ರತಿಹೆಕ್ಟೇರಿಗೆ ರೂ.6000/-)

| ಕ್ರ.ಸಂ | ಪರಿಕರಗಳು | ಸಹಾಯಧನದಮೊತ್ತ |
|---|---|---|
| 1. | ಬಿತ್ತನೆ ಬೀಜ(60 ಕೆ.ಜಿ-ರೂ.35/ಕೆ.ಜಿ) | 2100.00 |
| 2. | ಬೀಜೋಪಚಾರ ಔಷಧಿ | 100.00 |
| 3. | ಜೀವಾಣು/ಜೈವಿಕ ಗೊಬ್ಬರ | 1000.00 |
| 4. | ಲಘು ಪೋಷಕಾಂಶ | 600.00 |
| 5. | ಸಿಟಿ ಕಾಂಪೋಸ್ಟ್/ಎರೆಹುಳು ಗೊಬ್ಬರ | 3500.00 |
| 6. | ಸಸ್ಯ ಸಂರಕ್ಷಣಾ ಔಷಧಿ | 1000.00 |
| 7. | ವಿಜ್ಞಾನಿಗಳ ಭೇಟಿ | 250.00 |
| 8. | ಪ್ರಚಾರ/ಕ್ಷೇತ್ರೋತ್ಸವ/ನಾಮಫಲಕ/ಮುದ್ರಿತ ಪುಸ್ತಕ ಸಾಮಗ್ರಿ | |
| | ಒಟ್ಟು | **6000.00** |

3.ಸೂರ್ಯಕಾಂತಿ ಪ್ರಾತ್ಯಕ್ಷಿಕೆ:(ಶೇ.50% ರಿಯಾಯಿತಿ ದರದಲ್ಲಿ ಪರಿಕರ ವಿತರಣೆ ಗರಿಷ್ಠ ಮೊತ್ತ ಪ್ರತಿಹೆಕ್ಟೇರಿಗೆ ರೂ.4000/-)

| ಕ್ರ.ಸಂ | ಪರಿಕರಗಳು | ಸಹಾಯಧನದ ಮೊತ್ತ |
|---|---|---|
| 1. | ಬಿತ್ತನೆ ಬೀಜ(4 ಕೆ.ಜಿ-ರೂ.220/ಕೆ.ಜಿ) | 880.00 |
| 2. | ಬೀಜೋಪಚಾರ ಔಷಧಿ | 200.00 |
| 3. | ಜೀವಾಣು/ಜೈವಿಕ ಗೊಬ್ಬರ /ಲಘು ಪೋಷಕಾಂಶಗಳು/ ಸಿಟಿಕಾಂಪೋಸ್ಟ್/ಎರೆಹುಳು ಗೊಬ್ಬರ | 1020.00 |
| 4. | ಎಲೆ ಮೇಲೆ ಸಿಂಪಡಿಸುವ ಪೋಷಕಾಂಶಗಳು | 500.00 |
| 5. | ಕಳೆನಾಶಕ , ಸಸ್ಯ ಸಂರಕ್ಷಣಾ ರಾಸಾಯನಿಕಗಳು | 1000.00 |
| 6. | ಪ್ರಚಾರ/ಕ್ಷೇತ್ರೋತ್ಸವ/ನಾಮಫಲಕ/ಮುದ್ರಿತಪುಸ್ತಕ ಸಾಮಗ್ರಿ, ಇತರೆ | 400.00 |
| | **ಒಟ್ಟು** | **4000.00** |
| 7 | ಪರಾಗಸ್ಪರ್ಶಕ್ಕಾಗಿ ಜೇನು ಪೆಟ್ಟಿಗೆ ಇಟ್ಟಲ್ಲಿ ರೂ.2000/- ಪ್ರತಿ ಹೆ.ಗೆ ಪ್ರತ್ಯೇಕವಾಗಿ ನೀಡುವುದು | |

4.ಎಳ್ಳು ಪ್ರಾತ್ಯಕ್ಷಿಕೆ: (ಶೇ.50% ರಿಯಾಯಿತಿ ದರದಲ್ಲಿ ಪರಿಕರ ವಿತರಣೆ ಗರಿಷ್ಠ ಮೊತ್ತ ಪ್ರತಿಹೆಕ್ಟೇರಿಗೆ ರೂ.3000/-)

| ಕ್ರ.ಸಂ | ಪರಿಕರಗಳು | ಸಹಾಯಧನದ ಮೊತ್ತ |
|---|---|---|
| 1. | ಬಿತ್ತನೆ ಬೀಜ(1-1.5 ಕೆ.ಜಿ-ರೂ.330/ಕೆ.ಜಿ) | 600.00 |
| 2. | ಜೀವಾಣು/ಜೈವಿಕ ಗೊಬ್ಬರ /ಲಘು ಪೋಷಕಾಂಶಗಳು/ ಸಿಟಿಕಾಂಪೋಸ್ಟ್/ಎರೆಹುಳು ಗೊಬ್ಬರ | 1000.00 |
| 3. | ಬೀಜೋಪಚಾರ ಔಷಧಿ / ಕಳೆನಾಶಕ , ಸಸ್ಯ ಸಂರಕ್ಷಣಾ ರಾಸಾಯನಿಕಗಳು | 1100.00 |
| 4. | ಪ್ರಚಾರ/ಕ್ಷೇತ್ರೋತ್ಸವ/ನಾಮಫಲಕ/ಮುದ್ರಿತಪುಸ್ತಕ ಸಾಮಗ್ರಿ, ಇತರೆ | 300.00 |
| | **ಒಟ್ಟು** | **3000.00** |

5.ಹುಚ್ಚೆಳ್ಳು ಪ್ರಾತ್ಯಕ್ಷಿಕೆ: (ಶೇ.50% ರಿಯಾಯಿತಿ ದರದಲ್ಲಿ ಪರಿಕರ ವಿತರಣೆ ಗರಿಷ್ಠ ಮೊತ್ತ ಪ್ರತಿ ಹೆಕ್ಟೇರಿಗೆ ರೂ.3000/-)

| ಕ್ರ.ಸಂ | ಪರಿಕರಗಳು | ಸಹಾಯಧನದ ಮೊತ್ತ |
|---|---|---|
| 1. | ಬಿತ್ತನೆ ಬೀಜ(25 ಕೆ.ಜಿ-ರೂ.50/ಕೆ.ಜಿ) | 1250.00 |
| 2. | ಜೀವಾಣು/ಜೈವಿಕ ಗೊಬ್ಬರ /ಲಘು ಪೋಷಕಾಂಶಗಳು/ ಸಿಟಿ ಕಾಂಪೋಸ್ಟ್/ಎರೆಹುಳು ಗೊಬ್ಬರ | 750.00 |
| 3. | ಬೀಜೋಪಚಾರ ಔಷಧಿ / ಕಳೆನಾಶಕ, ಸಸ್ಯ ಸಂರಕ್ಷಣಾ ರಾಸಾಯನಿಕಗಳು | 750.00 |
| 4. | ಪ್ರಚಾರ/ಕ್ಷೇತ್ರೋತ್ಸವ/ನಾಮಫಲಕ/ಮುದ್ರಿತ ಪುಸ್ತಕ ಸಾಮಗ್ರಿ, ಇತರೆ | 250.00 |
| | ಒಟ್ಟು | **3000.00** |

6.ಹರಳು ಪ್ರಾತ್ಯಕ್ಷಿಕೆ: (ಶೇ.50% ರಿಯಾಯಿತಿ ದರದಲ್ಲಿ ಪರಿಕರ ವಿತರಣೆ ಗರಿಷ್ಠ ಮೊತ್ತ ಪ್ರತಿ ಹೆಕ್ಟೇರಿಗೆ ರೂ.3000/-)

| ಕ್ರ.ಸಂ | ಪರಿಕರಗಳು | ಸಹಾಯಧನದ ಮೊತ್ತ |
|---|---|---|
| 1. | ಬಿತ್ತನೆ ಬೀಜ(10-12ಕೆ.ಜಿ-ರೂ.100/ಕೆ.ಜಿ) | 1200.00 |
| 2. | ಬೀಜೋಪಚಾರ ಔಷಧಿ | 200.00 |
| 3. | ಜೀವಾಣು/ಜೈವಿಕ ಗೊಬ್ಬರ /ಲಘು ಪೋಷಕಾಂಶಗಳು/ ಸಿಟಿ ಕಾಂಪೋಸ್ಟ್/ಎರೆಹುಳು ಗೊಬ್ಬರ | 500.00 |
| 4. | ಕಳೆನಾಶಕ , ಸಸ್ಯ ಸಂರಕ್ಷಣಾ ರಾಸಾಯನಿಕಗಳು | 750.00 |
| 5. | ಪ್ರಚಾರ/ಕ್ಷೇತ್ರೋತ್ಸವ/ನಾಮಫಲಕ/ಮುದ್ರಿತ ಪುಸ್ತಕ ಸಾಮಗ್ರಿ, ಇತರೆ | 350.00 |
| | ಒಟ್ಟು | **3000.00** |

III. ಅಗಸೆ ಪ್ರಾತ್ಯಕ್ಷಿಕೆ: (ಶೇ.50% ರಿಯಾಯಿತಿ ದರದಲ್ಲಿ ಪರಿಕರ ವಿತರಣೆ ಗರಿಷ್ಠ ಮೊತ್ತ ಪ್ರತಿ ಹೆಕ್ಟೇರಿಗೆ ರೂ.3000/-)

| ಕ್ರ.ಸಂ | ಪರಿಕರಗಳು | ಸಹಾಯಧನದ ಮೊತ್ತ |
|---|---|---|
| 1. | ಬಿತ್ತನೆ ಬೀಜ(20-25 ಕೆ.ಜಿ-ರೂ.75/ಕೆ.ಜಿ) | 1500.00 |
| 2. | ಬೀಜೋಪಚಾರ ಔಷಧಿ | 200.00 |
| 3. | ಜೀವಾಣು/ಜೈವಿಕ ಗೊಬ್ಬರ /ಲಘು ಪೋಷಕಾಂಶಗಳು/ ಸಿಟಿ ಕಾಂಪೋಸ್ಟ್/ಎರೆಹುಳು ಗೊಬ್ಬರ | 500.00 |
| 4. | ಕಳೆನಾಶಕ, ಸಸ್ಯ ಸಂರಕ್ಷಣಾ ರಾಸಾಯನಿಕಗಳು | 500.00 |
| 5. | ಪ್ರಚಾರ/ಕ್ಷೇತ್ರೋತ್ಸವ/ನಾಮಫಲಕ/ಮುದ್ರಿ ತಪುಸ್ತಕ ಸಾಮಗ್ರಿ, ಇತರೆ | 300.00 |
| | ಒಟ್ಟು | **3000.00** |

IV. **ಕುಸುಬೆ ಪ್ರಾತ್ಯಕ್ಷಿಕೆ:** (ಶೇ.50% ರಿಯಾಯಿತಿ ದರದಲ್ಲಿ ಪರಿಕರ ವಿತರಣೆ ಗರಿಷ್ಠ ಮೊತ್ತ ಪ್ರತಿ ಹೆಕ್ಟೇರಿಗೆ **ರೂ**.3000/-)

| ಕ್ರ.ಸಂ | ಪರಿಕರಗಳು | ಸಹಾಯಧನದ ಮೊತ್ತ |
|---|---|---|
| 1. | ಬಿತ್ತನೆ ಬೀಜ10-15 ಕೆ.ಜಿ-ರೂ.65/ಕೆ.ಜಿ) | 975.00 |
| 2. | ಬೀಜೋಪಚಾರ ಔಷಧಿ | 200.00 |
| 3. | ಜೀವಾಣು/ಜೈವಿಕ ಗೊಬ್ಬರ /ಲಘು ಪೋಷಕಾಂಶಗಳು/ ಸಿಟಿ ಕಾಂಪೋಸ್ಟ್/ಎರೆಹುಳು ಗೊಬ್ಬರ | 750.00 |
| 4. | ಕಳೆನಾಶಕ , ಸಸ್ಯ ಸಂರಕ್ಷಣಾ ರಾಸಾಯನಿಕಗಳು | 750.00 |
| 5. | ಪ್ರಚಾರ/ಕ್ಷೇತ್ರೋತ್ಸವ/ನಾಮಫಲಕ/ಮುದ್ರಿತ ಪುಸ್ತಕ ಸಾಮಗ್ರಿ, ಇತರೆ | 325.00 |
| | **ಒಟ್ಟು** | **3000.00** |

01/07/20

**ಕೃಷಿ ಆಯುಕ್ತರು**

ಅನುಬಂಧ-3

## ಎಣ್ಣೆಕಾಳು ಬೆಳೆಗಳ ಪ್ರಾತ್ಯಕ್ಷತೆಗಳಿಗೆ ಒದಗಿಸಬೇಕಾದ ಪರಿಕರಗಳ ವಿವರ ಮತ್ತು ವೇಳಾಪಟ್ಟಿ

(ರೂ /ಹೆ)

| ಕ್ರ ಸಂ | ತಾಂತ್ರಿಕತೆಯ ಹೆಸರು | ಕಿಟ್ ರೂಪದಲ್ಲಿ | | | | | | ಕಿಟ್ ರೂಪದಲ್ಲಿ | | | | ಪ್ರಚಾರ, ಕ್ಷೇತ್ರೋತ್ಸವ ಮತ್ತು ಇತರ ವೆಚ್ಚ (ರೂ /ಹೆ) | ಮಹಾ ಮೊತ್ತ ರೂ/ಹೆ |
|---|---|---|---|---|---|---|---|---|---|---|---|---|---|
| | | | ಕಿಟ್-1 | | | | | ಕಿಟ್-2 | | | | | |
| | | ಬಿತ್ತನೆ ಬೀಜ (ರೂ /ಹೆ) | ಬೀಜೋಪಚಾರ ಔಷಧಿ (ರೂ /ಹೆ) | ಸಿಟಿ ಕಾಂಪೋಸ್ಟ್ / ಎರೆಹುಳು ಗೊಬ್ಬರ / ಜಿಪ್ಸಮ್ | ಜೈವಿಕ ಗೊಬ್ಬರ (ರೂ /ಹೆ) | ಲಘು ಪೋಷಕಾಂಶಗಳು (ರೂ /ಹೆ) | ಕಿಟ್ - 1 ಒಟ್ಟು ಮೊತ್ತ (ರೂ /ಹೆ) | ಕೀಟನಾಶಕ /ಕಳೆನಾಶಕ (ರೂ /ಹೆ) | ಎಲೆಗಳ ಮೇಲೆ ಪೋಷಕಾಂಶಗಳ ಸಿಂಪರಣೆ | ಕಿಟ್ - 2 ಒಟ್ಟು ಮೊತ್ತ (ರೂ /ಹೆ) | ಒಟ್ಟು ಮೊತ್ತ (ಕಿಟ್-1 + ಕಿಟ್-2) (ರೂ /ಹೆ) | | |
| 1 | ಗುಚ್ಚ ಪ್ರಾತ್ಯಕ್ಷಿಕೆ ನೆಲಗಡಲೆ | 5500.00 | 200.00 | 1000.00 | 250.00 | 550.00 | 2000.00 | 1500.00 | 500.00 | 2000.00 | 4000.00 | 500.00 | 10000.0 |
| 2 | ಗುಚ್ಚ ಪ್ರಾತ್ಯಕ್ಷಿಕೆ ಸೋಯಾಬೀನ್ | 2100.00 | 200.00 | 1000.00 | 200.00 | 300.0 | 1700.00 | 1200.00 | 500.00 | 1700.00 | 3400.00 | 500.00 | 6000.00 |
| 3 | ಗುಚ್ಚ ಪ್ರಾತ್ಯಕ್ಷಿಕೆ ಸೂರ್ಯಕಾಂತಿ | 880.00 | 200.00 | 520.00 | 200.00 | 300.0 | 1220.00 | 1000.00 | 500.00 | 1500.00 | 2720.00 | 400.00 | 4000.00 |
| 4 | ಗುಚ್ಚ ಪ್ರಾತ್ಯಕ್ಷಿಕೆ ಸೂರ್ಯಕಾಂತಿ (ಜೇನುಪೆಟ್ಟಿಗೆ ಸಹಿತ ಪ್ರತಿ ಹೆ ಗೆರೂ.2000/-ಪ್ರತ್ಯೇಕ) | 880.00 | 200.00 | 520.00 | 200.00 | 300.0 | 1220.00 | 1000.00 | 500.00 | 1500.00 | 2720.00 | 400.00 | 6000.00 |
| 5 | ಗುಚ್ಚ ಪ್ರಾತ್ಯಕ್ಷಿಕೆ ಎಳ್ಳು | 600.00 | | 500.00 | 200.00 | 300.0 | 1000.00 | 1100.00 | 0 | 1100.00 | 2100.00 | 300.00 | 3000.00 |
| 6 | ಗುಚ್ಚ ಪ್ರಾತ್ಯಕ್ಷಿಕೆ ಹುಚ್ಚೆಳ್ಳು | 1250.00 | | 450.00 | 100.00 | 200.0 | 750.00 | 750.00 | 0 | 750.00 | 1500.00 | 250.00 | 3000.00 |
| 7 | ಗುಚ್ಚ ಪ್ರಾತ್ಯಕ್ಷಿಕೆ ಹರಳು | 1200.00 | 200.00 | 250.00 | 100.00 | 150.00 | 700.00 | 750.00 | | 750.00 | 1450.00 | 350.00 | 3000.00 |
| 8 | ಗುಚ್ಚ ಪ್ರಾತ್ಯಕ್ಷಿಕೆ ಅಗಸೆ | 1500.00 | 200.00 | 250.00 | 100.00 | 150.00 | 700.00 | 500.00 | | 500.00 | 1200.00 | 300.00 | 3000.00 |
| 9 | ಗುಚ್ಚ ಪ್ರಾತ್ಯಕ್ಷಿಕೆ ಕುಸುಬೆ | 975.00 | 200.00 | 450.00 | 100.00 | 200.0 | 950.00 | 750.00 | | 750.00 | 1700.00 | 325.00 | 3000.00 |
| | ಸೂಚನೆ :ಮುಂಗಾರು ಬೆಳೆ | ಜುಲೈ 15 ಕ್ಕೆ ಅಂತಿಮಗೊಳಿಸುವುದು | | | | | | ಆಗಸ್ಟ್ 15 ಕ್ಕೆ ಅಂತಿಮಗೊಳಿಸುವುದು | | | | | |
| | *ಹಿಂಗಾರು ಬೆಳೆ | ಅಕ್ಟೋಬರ್ ಅಂತ್ಯಕ್ಕೆ ಅಂತಿಮಗೊಳಿಸುವುದು | | | | | | ನವೆಂಬರ್ ಅಂತ್ಯಕ್ಕೆ ಅಂತಿಮಗೊಳಿಸುವುದು | | | | | |

ಕೃಷಿ ಆಯುಕ್ತರು

ಅನುಬಂಧ-4

2020-21 ನೇ ಸಾಲಿನ ರಾಷ್ಟ್ರೀಯ ಆಹಾರ ಭದ್ರತಾ ಅಭಿಯಾನ-ಎಣ್ಣೆಕಾಳು ಬೆಳೆ ಯೋಜನೆಯ ಜಿಲ್ಲಾವಾರು ಕಾರ್ಯಕ್ರಮ (ಆರ್ಥಿಕ: ಲಕ್ಷ ರೂ.ಗಳಲ್ಲಿ)

| ಕ್ರ.ಸಂ | ಜಿಲ್ಲೆಗಳು | ತಳಿವರ್ಧಕ ಬೀಜ ಖರೀದಿ (ಕ್ವಿಂ) | | ಬೀಜ ವಿತರಣೆ (ಕ್ವಿಂ) | | ಪ್ರಾತ್ಯಕ್ಷಿಕೆ (ಹೆ) | | ತರಬೇತಿ (ಸಂಖ್ಯೆ) | | ಉತ್ಪಾದನಾ (ಕ್ವಿಂ/ಲೀ) ಪರಿಕರಗಳು | | ಶಕ್ತಿ ಚಾಲಿತ ಸಿಂಪರಣ ಉಪಕರಣ (12-16 ಲೀ) | | ಎಣ್ಣೆ ಗಾಣಗಳು (ಸಂಖ್ಯೆ) | | ಡಿಸೇಲ್ / ವಿದ್ಯುತ್ ಪಂಪ್ ಸೆಟ್ (ಸಂಖ್ಯೆ) | | ಯೋಜನ ನಿರ್ವಹಣಾ ವೆಚ್ಚ | | ಮಹಾ ಮೊತ್ತ | |
|---|---|---|---|---|---|---|---|---|---|---|---|---|---|---|---|---|---|---|---|---|---|
| | | ಗುರಿ | | ಗುರಿ | | ಗುರಿ | | ಗುರಿ | | ಗುರಿ | | ಗುರಿ | | ಗುರಿ | | ಗುರಿ | | ಗುರಿ | | ಗುರಿ | |
| | | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ |
| 1 | ಬಾಗಲಕೋಟೆ | | | 115 | 4.600 | 154 | 9.437 | 1 | 0.360 | 2410 | 14.850 | 9 | 0.326 | 12 | 2.945 | 7 | 1.665 | | 0.250 | 2708 | 34.433 |
| 2 | ಬೆಂಗಳೂರು(ನ) | | | 0 | 0.000 | 0 | 0.000 | 0 | 0.000 | 0 | 0.000 | 0 | 0.000 | 0 | 0.000 | 0 | 0.000 | | 0.250 | 0 | 0.250 |
| 3 | ಬೆಂಗಳೂರು(ಗ್ರಾ) | | | 0 | 0.000 | 41 | 4.114 | 0 | 0.000 | 8 | 0.040 | 0 | 0.000 | 0 | 0.000 | 0 | 0.000 | | 0.250 | 49 | 4.404 |
| 4 | ಬೆಳಗಾವಿ | | | 165 | 6.600 | 291 | 18.498 | 1 | 0.240 | 3209 | 18.570 | 13 | 0.462 | 17 | 4.460 | 15 | 3.600 | | 0.250 | 3711 | 52.680 |
| 5 | ಬಳ್ಳಾರಿ | | | 100 | 4.000 | 121 | 9.283 | 1 | 0.360 | 2009 | 11.695 | 9 | 0.326 | 12 | 3.025 | 9 | 2.160 | | 0.250 | 2261 | 31.099 |
| 6 | ಬೀದರ್ | | | 130 | 5.200 | 470 | 26.102 | 1 | 0.240 | 2708 | 15.940 | 12 | 0.424 | 14 | 3.870 | 12 | 2.880 | | 0.250 | 3347 | 54.906 |
| 7 | ಚಾಮರಾಜನಗರ | | | 40 | 1.600 | 25 | 2.469 | 1 | 0.240 | 758 | 4.665 | 4 | 0.152 | 5 | 1.515 | 3 | 0.720 | | 0.250 | 836 | 11.611 |
| 8 | ಚಿಕ್ಕಬಳ್ಳಾಪುರ | | | 40 | 1.600 | 41 | 4.114 | 2 | 0.600 | 808 | 5.040 | 4 | 0.152 | 5 | 1.515 | 3 | 0.720 | | 0.250 | 903 | 13.991 |
| 9 | ಚಿಕ್ಕಮಗಳೂರು | | | 30 | 1.200 | 35 | 2.769 | 0 | 0.000 | 458 | 2.915 | 4 | 0.152 | 1 | 0.250 | 1 | 0.225 | | 0.250 | 529 | 7.761 |
| 10 | ಚಿತ್ರದುರ್ಗ | | | 200 | 8.000 | 177 | 13.958 | 1 | 0.240 | 3108 | 19.965 | 9 | 0.326 | 14 | 4.375 | 9 | 2.160 | | 0.250 | 3518 | 49.274 |
| 11 | ದಾವಣಗೆರೆ | | | 0 | 0.000 | 49 | 4.937 | 0 | 0.000 | 909 | 5.820 | 1 | 0.038 | 1 | 0.250 | 1 | 0.225 | | 0.250 | 961 | 11.520 |
| 12 | ಧಾರವಾಡ | | | 90 | 3.600 | 190 | 13.305 | 1 | 0.360 | 1808 | 10.565 | 9 | 0.326 | 12 | 3.450 | 7 | 1.665 | | 0.250 | 2117 | 33.521 |
| 13 | ಗದಗ | | | 50 | 2.000 | 96 | 7.783 | 0 | 0.000 | 1158 | 6.315 | 7 | 0.242 | 9 | 2.355 | 6 | 1.440 | | 0.250 | 1326 | 20.385 |
| 14 | ಕಲಬುರ್ಗಿ | | | 50 | 2.000 | 151 | 10.414 | 0 | 0.000 | 959 | 5.545 | 6 | 0.212 | 8 | 2.610 | 5 | 1.215 | | 0.250 | 1179 | 22.246 |
| 15 | ಹಾಸನ | | | 0 | 0.000 | 71 | 3.557 | 0 | 0.000 | 450 | 3.125 | 3 | 0.106 | 0 | 0.000 | 0 | 0.000 | | 0.250 | 524 | 7.038 |

ಮುಂದುವರಿದಿದೆ

## ಅನುಬಂಧ-4

### 2020-21 ನೇ ಸಾಲಿನ ರಾಷ್ಟ್ರೀಯ ಆಹಾರ ಭದ್ರತಾ ಅಭಿಯಾನ-ಎಣ್ಣೆಕಾಳು ಬೆಳೆ ಯೋಜನೆಯ ಜಿಲ್ಲಾವಾರು ಕಾರ್ಯಕ್ರಮ (ಆರ್ಥಿಕ: ಲಕ್ಷ ರೂ.ಗಳಲ್ಲಿ)

| ಕ್ರ.ಸಂ | ಜಿಲ್ಲೆಗಳು | ತಳಿವರ್ಧಕ ಬೀಜ ಖರೀದಿ (ಕ್ವಿಂ) | | ಬೀಜ ವಿತರಣೆ (ಕ್ವಿಂ) | | ಪ್ರಾತ್ಯಕ್ಷಿಕೆ (ಹೆ) | | ತರಬೇತಿ (ಸಂಖ್ಯೆ) | | ಉತ್ಪಾದನಾ (ಕ್ವಿಂ/ಲೀ) ಪರಿಕರಗಳು | | ಶಕ್ತಿ ಚಾಲಿತ ಸಿಂಪರಣ ಉಪಕರಣ (12-16 ಲೀ) | | ಎಣ್ಣೆ ಗಾಣಗಳು (ಸಂಖ್ಯೆ) | | ಡಿಸೇಲ್ / ವಿದ್ಯುತ್ ಪಂಪ್ ಸೆಟ್ (ಸಂಖ್ಯೆ) | | ಯೋಜನ ನಿರ್ವಹಣಾ ವೆಚ್ಚ | | ಮಹಾ ಮೊತ್ತ | |
|---|---|---|---|---|---|---|---|---|---|---|---|---|---|---|---|---|---|---|---|---|---|
| | | ಗುರಿ | | ಗುರಿ | | ಗುರಿ | | ಗುರಿ | | ಗುರಿ | | ಗುರಿ | | ಗುರಿ | | ಗುರಿ | | ಗುರಿ | | ಗುರಿ | |
| | | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ |
| 16 | ಹಾವೇರಿ | | | 40 | 1.600 | 141 | 10.114 | 1 | 0.240 | 1359 | 8.695 | 5 | 0.174 | 5 | 1.515 | 3 | 0.720 | | 0.250 | 1554 | 23.308 |
| 17 | ಕೋಲಾರ | | | 0 | 0.000 | 41 | 4.114 | 0 | 0.000 | 358 | 2.165 | 2 | 0.060 | 1 | 0.250 | 1 | 0.225 | | 0.250 | 403 | 7.064 |
| 18 | ಕೊಪ್ಪಳ | | | 100 | 4.000 | 142 | 10.329 | 1 | 0.240 | 2059 | 12.445 | 12 | 0.424 | 12 | 3.450 | 7 | 1.665 | | 0.250 | 2333 | 32.803 |
| 19 | ಮಂಡ್ಯ | | | 0 | 0.000 | 30 | 0.900 | 0 | 0.000 | 358 | 2.290 | 5 | 0.182 | 0 | 0.000 | 0 | 0.000 | | 0.250 | 393 | 3.622 |
| 20 | ಮೈಸೂರು | | | 0 | 0.000 | 71 | 3.557 | 0 | 0.000 | 350 | 2.250 | 5 | 0.182 | 0 | 0.000 | 0 | 0.000 | | 0.250 | 426 | 6.239 |
| 21 | ರಾಯಚೂರು | | | 50 | 2.000 | 86 | 7.183 | 0 | 0.000 | 1608 | 10.190 | 8 | 0.288 | 11 | 3.705 | 5 | 1.215 | | 0.250 | 1768 | 24.8[illegible] |
| 22 | ರಾಮನಗರ | | | 0 | 0.000 | 0 | 0.000 | 0 | 0.000 | 158 | 1.165 | 0 | 0.000 | 0 | 0.000 | 0 | 0.000 | | 0.250 | 158 | 1.415 |
| 23 | ಶಿವಮೊಗ್ಗ | | | 0 | 0.000 | 0 | 0.000 | 0 | 0.000 | 400 | 3.000 | 0 | 0.000 | 0 | 0.000 | 0 | 0.000 | | 0.250 | 400 | 3.250 |
| 24 | ತುಮಕೂರು | | | 200 | 8.000 | 203 | 14.743 | 2 | 0.600 | 3247 | 21.133 | 11 | 0.386 | 11 | 3.360 | 7 | 1.665 | | 0.250 | 3681 | 50.136 |
| 25 | ಉಡುಪಿ | | | 0 | 0.000 | 0 | 0.000 | 0 | 0.000 | 408 | 3.040 | 0 | 0.000 | 0 | 0.000 | 0 | 0.000 | | 0.250 | 408 | 3.290 |
| 26 | ಉತ್ತರಕನ್ನಡ | | | 0 | 0.000 | 0 | 0.000 | 0 | 0.000 | 469 | 3.498 | 0 | 0.000 | 0 | 0.000 | 0 | 0.000 | | 0.250 | 469 | 3.748 |
| 27 | ಬಿಜಾಪುರ | | | 0 | 0.000 | 69 | 5.737 | 1 | 0.240 | 1158 | 7.690 | 2 | 0.060 | 1 | 0.250 | 4 | 0.945 | | 0.250 | 1235 | 15.172 |
| 28 | ಯಾದಗಿರಿ | | | 0 | 0.000 | 66 | 6.583 | 1 | 0.240 | 808 | 4.540 | 9 | 0.320 | 4 | 1.425 | 5 | 1.215 | | 0.250 | 893 | 14.573 |
| | ಕೇಂದ್ರ ಕಛೇರಿ | 1055 | 154.630 | | | | | | | | | | | | | | | 1 | 14.380 | 1056 | 169.010 |
| | **ಒಟ್ಟು** | **1055** | **154.630** | **1400** | **56.000** | **2762** | **194.000** | **15** | **4.200** | **33500** | **207.150** | **149** | **5.320** | **155** | **44.575** | **110** | **26.325** | **1** | **21.380** | **39147** | **713.580** |

ಕೃಷಿ ಆಯುಕ್ತರು